ಸೃಜನಿ
SRUJANI: Indian Journal of Innovative Research and Development (SIJIRD)
Volume-3 Issue 3, July-August 2024, Pp. 12-18
Bi-Monthly, Peer-Reviewed, Open Access, Indexed Journal
I S S N: 2583-3510
SIRDF JOURNALS
editor@srujani.in
www.srujani.in

ಬುಡಕಟ್ಟು ಸಂಸ್ಕೃತಿ ಮತ್ತು ಸಾಹಿತ್ಯ

ಅನಿಲ್ ಕುಮಾರ್ ಎಂ.ಕೆ
ಸಂಶೋಧನಾ ವಿದ್ಯಾರ್ಥಿ, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

Abstract:
ಮನುಷ್ಯನ ಜೀವನ ಭೂತ ಮತ್ತು ವರ್ತಮಾನಗಳೊಂದಿಗೆ ಬೆಸೆಯುತ್ತಾ ಇಲ್ಲಿಯವರೆಗೆ ಹಲವು ಅವಸ್ಥೆಗಳನ್ನು ಹೊಂದಿದೆ. ಈ ದೃಷ್ಟಿಯಿಂದ ಸಂಸ್ಕೃತಿಯೆಂಬುದು ಸ್ಥಿರತೆಯನ್ನು ಕಾಯ್ದಿರಿಸುವುದರ ಬದಲಾಗಿ ಚಲನಶೀಲವುಳ್ಳದ್ದಾಗಿದೆ. ಪ್ರಕೃತಿ ಮತ್ತು ಮನಷ್ಯನ ನಡುವೆ ಅನ್ಯೂನ್ಯತೆ ಇರುವಂತೆಯೇ ಸಮಾಜ ಮತ್ತು ಸಂಸ್ಕೃತಿಗಳು ಒಂದಕ್ಕೊಂದು ಪೂರಕವಾಗಿವೆ. ಇವರೆಡು ಒಂದೇ ವಿಧವಾದವು, ಒಂದರೊಳಗೊಂದು ಸರಿಬೆರತು ಮಾನವನ ಬೌದ್ಧಿಕತೆಯನ್ನು ವಿಕಸಿತಗೊಳಿಸಿವೆ. ಹಾಗಾಗಿ ಕ್ರೋಬರ್ ಎನ್ನುವ ಸಂಸ್ಕೃತಿ ಚಿಂತಕರು "ನಾವು ಕಲಿತ ಹಾಗೂ ಪ್ರಸಾರ ಮಾಡುವ ಸ್ವಭಾವ, ತಂತ್ರ ವಿಧಾನ, ಚಿಂತನೆ ಮತ್ತು ಮೌಲ್ಯಗಳ ಮೊತ್ತವಾಗಿದೆ" ಎಂದು ಅಭಿಪ್ರಾಯ ಪಟ್ಟಿದ್ದಾರೆ. ಇದರಿಂದ ಸಂಸ್ಕೃತಿ ಎಂದರೆ ಮನುಷ್ಯನ ಬದುಕಿನ ಅವಸ್ಥೆ ಎಂದು ತಿಳಿಯುತ್ತದೆ. ಆದರೆ ಭಾಷಿಕ ಅರ್ಥದಲ್ಲಿ ಸಂಸ್ಕೃತಿ ಎಂಬುದರಲ್ಲಿ ವಿಶಿಷ್ಟತೆಯಿದೆ. ಪ್ರಸ್ತುತ ಲೇಖನದಲ್ಲಿ ಬುಡಕಟ್ಟು ಸಂಸ್ಕೃತಿ ಮತ್ತು ಸಾಹಿತ್ಯ ಕುರಿತು ಬೆಳಕು ಚೆಲ್ಲಲಾಗಿದೆ.

Keywords: *ಬುಡಕಟ್ಟು ಸಮುದಾಯ, ಸಾಹಿತ್ಯ, ಸಾಂಸ್ಕೃತಿಕ ಅನನ್ಯತೆ.*

ಪೀಠಿಕೆ

ಸಂಸ್ಕೃತಿ ಎಂಬ ಪದವು ಮೂಲತಃ ಲ್ಯಾಟಿನ್ ಭಾಷೆಯ 'ಕಲ್ಚರ್' ಶಬ್ದದಿಂದ ಬಂದಿದೆ. ಈ 'ಕಲ್ಚರ್' ಎಂಬ ಪದಕ್ಕೆ ಕನ್ನಡದಲ್ಲಿ ಪರ್ಯಾಯ ಪದವಾಗಿ 'ಸಂಸ್ಕೃತಿ' ಎಂಬ ಅರ್ಥವು ರೂಢಿಯಲ್ಲಿದೆ. ಡಿ.ವಿ.ಗುಂಡಪ್ಪನವರು ಮ್ಯಾಥ್ಯೂ ಅರ್ನಾಲ್ಡ್ ಅವರ ವ್ಯಾಖ್ಯಾನವನ್ನು ಸಮರ್ಥಿಸುತ್ತಾರೆ. ಅದು "ಸಂಸ್ಕಾರದಿಂದ ಸಂಸ್ಕೃತಿ ಬೆಳೆಯುತ್ತದೆ. ಸಂಸ್ಕಾರ ಅಥವಾ ಸಂಸ್ಕರಣ ಅಂದರೆ ಸಮ್ಯಕ್–ಕರಣ, ಸಮ್ಯಕ್– ಕೃತಿ ಸಂಸ್ಕೃತಿ" ಎಂದು ವಿವರಿಸಿದ್ದಾರೆ. ಮತ್ತೊಬ್ಬ ವಿದ್ವಾಂಸ ಇ.ಬಿ. ಟೇಲರ್ ಕೂಡಾ ಸಂಸ್ಕೃತಿ ಕುರಿತಾಗಿ "ಸಮಾಜದ ಒಬ್ಬ ಸದಸ್ಯನಾಗಿ ಮನುಷ್ಯನು ಗಳಿಸಿಕೊಂಡ ಜ್ಞಾನ, ನಂಬಿಕೆ, ಕಲೆ, ನೀತಿ–ನಿಯಮ, ಆಚರಣೆ, ಸ್ವಭಾವ ಯಾವುದೇ ಶಕ್ತಿ ಸ್ಥಿತಿಯನ್ನು ಒಳಗೊಳ್ಳುವ ಒಂದು ಸಂಕೀರ್ಣವೇ ಸಂಸ್ಕೃತಿ" ಎಂಬುದಾಗಿ ಅಭಿಪ್ರಾಯ ಪಡುತ್ತಾರೆ. ಇದು ಮನುಷ್ಯನ ಇಡೀ ಬದುಕಿನ ಪರಂಪರೆಯನ್ನು ಸಂಸ್ಕೃತಿಯೆಂದು ಕರೆಯಲಾಗುತ್ತದೆ. ಈ ಸ್ವರೂಪದ ಸಂಸ್ಕೃತಿ ಸಾಮಾಜಿಕ ರಚನೆಯಿಂದಾದ ಈ ರಚನಾ ವಿನ್ಯಾಸ ನಿತ್ಯವೂ ಸುಧಾರಣೆಗೊಳ್ಳುತ್ತದೆ. ಸಮಾಜದಲ್ಲಿ ಹೊಸ ಹೊಸ ವಿದ್ಯಮಾನಗಳು ಜರುಗುವುದರಿಂದ ಮನುಷ್ಯನ ಬದುಕಿನ ಮೇಲೆ ನೇರವಾಗಿ ಪರಿಣಾಮ ಬೀರುತ್ತವೆ. ಇದರಿಂದ ವ್ಯಕ್ತಿ ಅಥವಾ ಸಮುದಾಯಗಳಲ್ಲಿ ಪಲ್ಲಟಗಳಾಗುತ್ತವೆ.

Please cite this article as: ಅನಿಲ್ ಕುಮಾರ್ ಎಂ. ಕೆ. (2024). ಬುಡಕಟ್ಟು ಸಂಸ್ಕೃತಿ ಮತ್ತು ಸಾಹಿತ್ಯ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 3(3), 12–18

ಬುಡಕಟ್ಟು ಸಮುದಾಯಗಳ ಸಾಂಸ್ಕೃತಿಕ ಅನನ್ಯತೆ

ಭಾರತೀಯ ಸಂಸ್ಕೃತಿಯಲ್ಲಿ ವಿಶಿಷ್ಟ ರೀತಿಯ ಬುಡಕಟ್ಟು ಸಮುದಾಯಗಳು ಕಂಡುಬರುತ್ತವೆ. ಪ್ರತಿಯೊಂದು ಬುಡಕಟ್ಟು ಸಮುದಾಯಕ್ಕೂ ಕೂಡ ಒಂದು ಪರಂಪರೆ ಇದ್ದು ಜಾನಪದೀಯವಾಗಿ ತಮ್ಮದೇ ಆದ ಅಸ್ತಿತ್ವವನ್ನು ಉಳಿಸಿಕೊಂಡಿರುತ್ತದೆ. ಕುಲ–ಗೋತ್ರ, ಜೀವನ ವಿಧಾನ, ಆಚಾರ–ವಿಚಾರ, ವೇಷ–ಭೂಷಣ, ಆಹಾರ ಪದ್ಧತಿ, ಆಚರಣೆಗಳು, ಸಂಪ್ರದಾಯಗಳು–ನಂಬಿಕೆಗಳು, ಕಲೆ–ಸಾಹಿತ್ಯ ಒಟ್ಟಾರೆ ಈ ಬುಡಕಟ್ಟು ಸಮುದಾಯಗಳಲ್ಲಿ ವೈವಿಧ್ಯವೆನ್ನುವ ಹಾಗೆ ಕಂಡುಬರುತ್ತವೆ. ಈ ಬುಡಕಟ್ಟು ಸಮುದಾಯಗಳು ಬಹುಮುಖ್ಯವಾಗಿ ಪಾರಂಪರಿಕ ವೃತ್ತಿಕಸುಬು ಮತ್ತು ಕಲೆಯನ್ನು ತುಂಬಾ ವಿಶಿಷ್ಟವಾಗಿ ಹೊಂದಿರುತ್ತವೆ.

ಕನ್ನಡ ನಾಡಿನ ಸಾಂಸ್ಕೃತಿಕ ಪರಂಪರೆಯೊಳಗೆ ಬುಡಕಟ್ಟು ಸಮುದಾಯಗಳಿಗೆ ವಿಶೇಷ ಸ್ಥಾನವಿದೆ. ಸೋಲಿಗ, ಜೇನುಕುರುಬ, ಬೆಟ್ಟಕುರುಬ, ಹಕ್ಕಿಪಿಕ್ಕಿ, ಯೆರವ ಸಿದ್ಧಿ, ಮುಂತಾದ ಐವತ್ತು ಪರಿಶಿಷ್ಟ ಬುಡಕಟ್ಟು ಸಮುದಾಯಗಳು ಕರ್ನಾಟಕದಲ್ಲಿದ್ದು, ಪ್ರತಿಯೊಂದು ಸಮುದಾಯಗಳು ತಮ್ಮದೇಯಾದ ಸಾಮಾಜಿಕ ಪದ್ಧತಿ ಮತ್ತು ಸಂಸ್ಕೃತಿಯನ್ನು ಅಳವಡಿಸಿಕೊಂಡು ಜೀವಿಸುತ್ತಿದ್ದಾರೆ. ಈ ಐವತ್ತು ಪರಿಶಿಷ್ಟ ಬುಡಕಟ್ಟು ಸಮುದಾಯಗಳಲ್ಲದೆ ಇನ್ನೂ ಅನೇಕ ಬುಡಕಟ್ಟು ಸಮುದಾಯಗಳು ಪರಿಶಿಷ್ಟ ಬುಡಕಟ್ಟು ಪಟ್ಟಿಯಿಂದ ಹೊರಗಿದ್ದು ವಿವಿಧ ಸಮುದಾಯಗಳ ಪ್ರಮಾಣ ಪತ್ರವನ್ನು ಪಡೆದುಕೊಳ್ಳುತ್ತಿವೆ. ಅಂತಹ ಅನೇಕ ಸಮುದಾಯಗಳಲ್ಲಿ ಪ್ರಸ್ತುತ ಅಧ್ಯಯನಕ್ಕೆ ಲಂಬಾಣಿ, ಕಾಡುಗೊಲ್ಲ ಮತ್ತು ಮ್ಯಾಸಬೇಡ ಬುಡಕಟ್ಟು ಸಮುದಾಯಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಮೂಲತಃ ಈ ಮೂರು ಬುಡಕಟ್ಟುಗಳು ಬೇರೆ ಬೇರೆ ಪ್ರದೇಶಗಳಿಂದ ವಲಸೆ ಬಂದ ಸಮುದಾಯಗಳಾಗಿವೆ. ಮಧ್ಯ ಕರ್ನಾಟಕದ ಚಿತ್ರದುರ್ಗ, ಬಳ್ಳಾರಿ, ತುಮಕೂರು ಮತ್ತು ನೆರೆ ರಾಜ್ಯ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯಲ್ಲಿ ಮ್ಯಾಸಬೇಡ ಮತ್ತು ಕಾಡುಗೊಲ್ಲ ಸಮುದಾಯಗಳು ಅಧಿಕ ಸಂಖ್ಯೆಯಲ್ಲಿ ಕಂಡುಬರುತ್ತವೆ. ಲಂಬಾಣಿ ಸಮುದಾಯವು ಬಹುಮುಖ್ಯವಾಗಿ ಬೆಳಗಾವಿ, ಧಾರವಾಡ, ಹಾವೇರಿ, ದಾವಣಗೆರೆ, ಬಳ್ಳಾರಿ, ಚಿತ್ರದುರ್ಗ ಭಾಗದಲ್ಲಿ ಕಂಡುಬರುತ್ತದೆ.

ಲಂಬಾಣಿ, ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟುಗಳು ಬಹುಮುಖ್ಯವಾಗಿ ಪಶುಪಾಲಕರು. ಪಶುಗಳಿಗೆ ಹುಲ್ಲು ನೀರು ಸಿಗುವಂತಹ ಪ್ರದೇಶವನ್ನು ಹುಡುಕಿಕೊಂಡು ಅಡವಿಗಳಲ್ಲಿ ಹಟ್ಟಿಗಳನ್ನು ಕಟ್ಟಿಕೊಂಡು ವಾಸಿಸುತ್ತಿದ್ದರು.

ಬುಡಕಟ್ಟು ಸಮುದಾಯಗಳ ಸಾಮಾಜಿಕ ವ್ಯವಸ್ಥೆ

ಲಂಬಾಣಿ, ಮ್ಯಾಸಬೇಡ ಮತ್ತು ಕಾಡುಗೊಲ್ಲ ಸಮುದಾಯಗಳು ತಮ್ಮದೇ ಆದ ಸಂಪ್ರದಾಯ, ಆಚರಣೆ, ನಂಬಿಕೆ, ವಿಧಿ–ನಿಷೇಧ ಹಾಗೂ ಸಾಮಾಜಿಕ ನಿಯಂತ್ರಣವನ್ನೊಳಗೊಂಡ ಕ್ರಮಬದ್ಧವಾದ ಜೀವನ ವಿಧಾನ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಹೊಂದಿವೆ. ಇದರಲ್ಲಿ ಅನೇಕ ಉಪವ್ಯವಸ್ಥೆಗಳಿವೆ. ಪ್ರಸ್ತುತ ಲೇಖನದಲ್ಲಿ ಸಾಮಾಜಿಕ ವ್ಯವಸ್ಥೆಯಲ್ಲಿ ಮೂರು ಸಮುದಾಯಗಳ ಕುಟುಂಬ ವ್ಯವಸ್ಥೆ, ನಂಬಿಕೆ, ಸಂಪ್ರದಾಯ ಮತ್ತು ಆಚರಣೆಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ. ಸಾಮಾಜಿಕ ವ್ಯವಸ್ಥೆ ಎಂದರೆ ಸಾಮಾಜಿಕ ಅಂತಃಕ್ರಿಯೆಗಳನ್ನು ಕುರಿತು ಅಧ್ಯಯನ ಮಾಡುವುದಾಗಿದೆ. ಸಮಾಜ ಜೀವಿಯಾಗಿ ಮಾನವರು ಆಚರಿಸುವ, ರೂಢಿಸಿಕೊಂಡು ಬಂದಿರುವ ಎಲ್ಲಾ ಸಂಪ್ರದಾಯಗಳನ್ನು ಸಾಮಾಜಿಕ ವ್ಯವಸ್ಥೆಯಲ್ಲಿ ಕಾಣಬಹುದಾಗಿದೆ.

ನಂಬಿಕೆ, ಸಂಪ್ರದಾಯ ಮತ್ತು ಆಚರಣೆಗಳು

ಆರ್.ಎಸ್.ಬಾಗ್ಸ್ ಅವರು "ನಂಬಿಕೆಗಳು ಪುನರಾವೃತವಾಗುವ ಸಾಮೂಹಿಕ ವೀಕ್ಷಣೆಯ ಫಲವಾಗಿ ಮೂಡುವ ಕಾರ್ಯಕಾರಣ ಸಂಬಂಧವುಳ್ಳದಾಗಿರುವ ಸಾಂಪ್ರದಾಯಿಕ ಭಾವನೆ, ನಂಬಿಕೆ ಮಾನಸಿಕ ಸ್ಥಿತಿಯ ಒಂದು ಪದ" ಎಂದು

ಅಭಿಪ್ರಾಯ ಪಟ್ಟಿದ್ದಾರೆ. ಬುಡಕಟ್ಟು ಸಮುದಾಯಗಳಲ್ಲಿ ಪ್ರಮುಖವಾಗಿ ನಂಬಿಕೆ–ನಿಷೇಧಗಳನ್ನು ಕಾಣಬಹುದು. ಅನೇಕ ನಂಬಿಕೆ, ಸಂಪ್ರದಾಯ, ಆಚರಣೆಗಳನ್ನು ಒಳಗೊಂಡು ಇವರ ಬದುಕು ರೂಪಿತವಾಗುತ್ತದೆ. ಬುಡಕಟ್ಟು ಜನರ ನಡೆ ನುಡಿಗಳೆಲ್ಲವು ನಂಬಿಕೆ ಸಂಪ್ರದಾಯದಂತೆಯೇ ಇರುತ್ತದೆ. ಪ್ರತಿಯೊಂದು ಸಮುದಾಯಗಳಲ್ಲಿ ನಂಬಿಕೆ ಸಂಪ್ರದಾಯ ಆಚರಣೆಗಳಿವೆ. ನಂಬಿಕೆ ಕುರಿತು ವೈಜ್ಞಾನಿಕ ವಿಶ್ಲೇಷಣೆ ಕೊಡುವುದಾದರೆ ಮುಂದಾಗುವ ಕೆಡುಕುಗಳಿಗೆ ಉತ್ತರ ಕಂಡುಕೊಳ್ಳುವ ಮನುಷ್ಯನ ಜ್ಞಾನ, ಲಂಬಾಣಿ, ಮ್ಯಾಸಬೇಡ ಮತ್ತು ಕಾಡುಗೊಲ್ಲ ಬುಡಕಟ್ಟಿನಲ್ಲಿರುವ ಸಂಬಂಧಿಸಿದಂತೆ ಇವೆ.

ಲಂಬಾಣಿ ಸಮುದಾಯದ ನಂಬಿಕೆ ಮತ್ತು ನಿಷೇಧಗಳು

ಲಂಬಾಣಿ ಸಮುದಾಯದವು ನಂಬಿಕೆ–ನಿಷೇಧಗಳು ಮನಸ್ಸಿಗೆ ಶಾಂತಿ ತಂದುಕೊಡುತ್ತವೆಂದು ನಂಬಿ ಬದುಕುತ್ತಿದ್ದಾರೆ. ಎದುರಿಗೆ ಬೆಕ್ಕು, ಹಾವು ಅಡ್ಡಬಂದರೆ ಅಶುಭ, ವಿಧವೆ ಎದರುಗೆ ಬಂದರೆ ಅಶುಭ, ಕಟ್ಟಿಗೆ ಹೊರೆ ಹೊತ್ತ ಮಹಿಳೆ ಬಂದರೆ ಅಶುಭ, ಮಹಿಳೆ ಕೈಯಿಂದ ಅರಿಶಿನ–ಕುಂಕುಮ ಜಾರಿಬಿದ್ದರೆ ಅಶುಭ ಎಂದು ನಂಬುತ್ತಾರೆ. ಹೆಣ್ಣಿಗೆ ಎಡಗಣ್ಣು ಅದಿರಿದರೆ, ತುಂಬಿದ ಕೊಡ ಹೊತ್ತ ಮುತ್ತೈದೆ ಎದುರಿಗೆ ಬಂದರೆ ಶುಭ ಎಂದು ಭಾವಿಸುತ್ತಾರೆ. ಲಂಬಾಣಿಗಳಲ್ಲಿ ಹೆಣ್ಣು ಮಕ್ಕಳಿಗೆ ಮೆಳ್ಳಗಣ್ಣಿದ್ದರೆ ಗಂಡನ ಮನೆಗೆ ಶುಭವಾಗುತ್ತೆ. ಹೆಣ್ಣಿಗೆ ಎಡಗಡೆ ಗಂಡಿಗೆ ಬಲಗಡೆ ಮಚ್ಚೆ ಇದ್ದರೆ ಶುಭ ಎಂದು ನಂಬುತ್ತಾರೆ. ನಾಲಿಗೆ ಮೇಲೆ ಕಪ್ಪು ಮಚ್ಚೆ ಇದ್ದರೆ ಅವರು ನುಡಿದಂತೆ ಆಗುತ್ತದೆ. ಹೆಣ್ಣಿನ ಎಡಗಾಲು, ಎಡಗೈಯಲ್ಲಿ ಆರು ಬೆರಳಿದ್ದರೆ ಶುಭ ಎಂದು ನಂಬುತ್ತಾರೆ.

ಮ್ಯಾಸಬೇಡ ಸಮುದಾಯದ ನಂಬಿಕೆ–ನಿಷೇಧಗಳು

ಮ್ಯಾಸಬೇಡರಲ್ಲಿ ನಂಬಿಕೆಗಳು ಶುಭ ಮತ್ತು ಅಶುಭ ಸಂಕೇತಗಳನ್ನು ಸಂಕೇತಿಸುವ ಮೂಲಕ ಅಸ್ತಿತ್ವದಲ್ಲಿವೆ. ಇವು ಭವಿಷ್ಯದ ಕಾರ್ಯದ ಮುನ್ಸೂಚಕಗಳಾಗಿವೆ. ಮಹತ್ವದ ಕಾರ್ಯಕ್ಕೆ ಹೊರಗಡೆ ಹೋಗುವಾಗ ಇರುವ ನಂಬಿಕೆಗಳು. ಮ್ಯಾಸಬೇಡರಲ್ಲಿ ದೂರದ ಊರಿಗೆ ಹೋಗುವಾಗ ತುಂಬಿದ ಕೊಡ ಹೊತ್ತು ಸುಮಂಗಲಿಯರು ಎದುರುಬಂದರೆ ಶುಭ ಶಕುನ ಎಂದು ನಂಬುತ್ತಾರೆ. ನರಿ ಮುಖ ನೋಡಿದರೆ, ಮುಂಗುಸಿ ಅಡ್ಡ ಬಂದರೆ ಶುಭವಾಗುತ್ತದೆ. ಕಣ್ಣು ರೆಪ್ಪೆ ಅದರುವುದು–ಹೆಣ್ಣಿಗೆ ಎಡಗಣ್ಣು, ಗಂಡಿಗೆ ಬಲಗಣ್ಣು ಅದಿರಿದರೆ ಶುಭವಾಗುತ್ತದೆ ಎಂದು ನಂಬುತ್ತಾರೆ. ವಿಧವೆ ಎದುರಿಗೆ ಬಂದರೆ ಅಶುಭ, ವಿಧವೆ ಯಾವುದೇ ಶುಭ ಕಾರ್ಯಕ್ಕೆ ಹೋದರೂ ಕೆಟ್ಟದಾಗುತ್ತದೆ ಎಂಬ ನಂಬಿಕೆ, ಬೆಕ್ಕು ಅಡ್ಡ ಬಂದರೆ ಕೆಟ್ಟದಾಗುತ್ತೆ ಎಂಬ ನಂಬಿಕೆ, ಕಟ್ಟಿಗೆ ಹೊರೆಹೊತ್ತ ಮಹಿಳೆ ಎದುರು ಬಂದರೆ ಅಶುಭ ಎಂದು ಭಾವಿಸುತ್ತಾರೆ.

ಕಾಡುಗೊಲ್ಲ ಸಮುದಾಯದ ನಂಬಿಕೆ–ನಿಷೇಧಗಳು

ಇತರೆ ಬುಡಕಟ್ಟುಗಳಲ್ಲಿ ಇದ್ದ ನಂಬಿಕೆ ಆಚರಣೆಗಳಂತೆ ಕಾಡುಗೊಲ್ಲರಲ್ಲೂ ಕೆಲವು ನಂಬಿಕೆಗಳಿರುವುದನ್ನು ನಾವು ಗುರುತಿಸಬಹುದು. ಮನುಷ್ಯ ಜೀವನದ ಒಂದು ಭಾಗವಾಗಿ ನಾವು ನಂಬಿಕೆಯನ್ನು ನೋಡುತ್ತೇವೆ. ನಂಬಿಕೆ, ಸಂಪ್ರದಾಯಗಳೆಲ್ಲವು ಹೇರಲ್ಪಟ್ಟಿರುವುದು ಮಹಿಳೆಯ ಮೇಲೆಯೇ ಎಂಬುದನ್ನು ನಾವು ಇಲ್ಲಿ ಗಮನಿಸಬೇಕಾಗುತ್ತದೆ. ಕಾಡುಗೊಲ್ಲರಲ್ಲಿ ಮುಟ್ಟಾದ ಹೆಂಗಸರು ವಾಸದ ಮನೆಯಿಂದ ಹೊರಗೆ ಇರಬೇಕು. ಮನೆಯಲ್ಲಿ ಏನಾದರು ಚೇಳು ಕಾಣಿಸಿಕೊಂಡರೆ, ಯಾರಿಗಾದರೂ ಹುಷಾರಿಲ್ಲದಿದ್ದರೆ ವಾರ ಮಾಡುವಾಗ ಏನು ತಪ್ಪು ಮಾಡಿದ್ದೀಯ ಅದಕ್ಕೆ ಚೇಳು ಕಾಣಿಸಿಕೊಂಡಿದೆ. ದೇವರ ಮುಂದೆ ತಪ್ಪು ಕಾಣಿಕೆ ಹಾಕು ಎಂದು ಮನೆಯಲ್ಲಿನ ಹೆಣ್ಣು ಮಕ್ಕಳಿಗೆ ಒತ್ತಾಯಿಸುತ್ತಾರೆ. ಕಾಡುಗೊಲ್ಲರಿಗೂ ಊರು ಗೊಲ್ಲರಿಗೂ ಯಾವುದೇ ಸಾಮ್ಯತೆಗಳಿಲ್ಲ ಎಂಬುದಕ್ಕೆ ಪುರಾಣ ಕಾವ್ಯಗಳಲ್ಲಿ ಉಲ್ಲೇಖವಿದೆ.

ಚಿತ್ತಯ್ಯ ಮತ್ತು ಕಾಟಮುಲಿಂಗರ ಹುಟ್ಟಿನ ಸಂದಿನಲ್ಲಿ ಈ ರೀತಿ ಹೇಳಲಾಗಿದೆ.

"ಕಾಡುಗೊಲ್ಲರು ನಾವು
ಊರು ಜನಗಳು ನೀವು
ನಿಮ್ಮಿಗು ನಮ್ಮಿಗು
ನೆರಳಾಯಿಸಬಾರದಯ್ಯ
.....ಕಾರಣ
ನೀವು ಊರ ಜನ
ಈಚೆ ಆದ್ರೆ (ಮುಟ್ಟಾದಾಗ) ಒಳಗಡೆ ಇರ್ತಾರೆ
ನಿಮ್ಮ ಮನೆಯೊಳಗೆ ಹೆಂಗ್ಸುರು ಹೆರಿಗೆ ಆದ್ರೆ
ಒಳಗೆ ಇರ್ತರಯ್ಯಾ
ನಮಗೆ ಸೂತ ಆಗಕಿಲ್ಲ".[1]

ಮೇಲಿನ ಕಾವ್ಯದಲ್ಲಿ ಹೆಣ್ಣಿಗೆ ಈ ಸಮುದಾಯದಲ್ಲಿ ಹೇರಿರುವ ಸಂಪ್ರದಾಯಗಳ ಬಗ್ಗೆ ತಿಳಿಯುತ್ತದೆ. ಒಂದು ವೇಳೆ ಊರುಗೊಲ್ಲರೊಂದಿಗೆ ನಾವು ಬೆರೆತರೆ ತಮ್ಮ ವ್ರತ ಕೆಡುತ್ತದೆ ಎಂದು ಹಿರಿಯರು ದೂರ ಇರುತ್ತಾರೆ.

ಬುಡಕಟ್ಟುಗಳ ಧಾರ್ಮಿಕ ಆಚರಣೆಗಳು

ಬುಡಕಟ್ಟು ಸಮುದಾಯಗಳು ತಾವು ವಾಸಿಸುವ ಆಯಾ ಪ್ರಾದೇಶಿಕ ಧರ್ಮ ಹಾಗೂ ದೇವರು–ದೇವತೆಗಳನ್ನು ಮತ್ತು ಹಬ್ಬ–ಹರಿದಿನಗಳನ್ನು ತಮ್ಮದಾಗಿ ಮಾಡಿಕೊಂಡು ಆಚರಿಸುತ್ತಾ ಬಂದಿದ್ದಾರೆ. ಬುಡಕಟ್ಟು ಸಮುದಾಯದ ಜನ ಜೀವನದಲ್ಲಿ ಬರುವ ಕಷ್ಟ–ಸುಖಗಳಿಗೂ, ಒಳಿತು– ಕೆಡಕುಗಳಿಗೂ ಮೂಲಭೂತವಾದ ಅಗೋಚರ ಶಕ್ತಿಯೊಂದಿದೆ ಎಂದು ನಂಬುತ್ತಾರೆ. ಆ ಮೂಲಭೂತ ಶಕ್ತಿಯ ಇಚ್ಛೆಯಂತೆ ಎಲ್ಲವೂ ನಡೆಯುತ್ತದೆ. ಹಾಗಾಗಿ ಆ ಶಕ್ತಿಯ ವಿರುದ್ಧ ಹೋಗುವುದು ಅಸಾಧ್ಯ ಮತ್ತು ಅಪಾಯ ಎಂದು ನಂಬಿದ್ದಾರೆ. ಜನಪದರು ಹಬ್ಬ–ಹರಿದಿನ ಹಾಗೂ ಜಾತ್ರೆ–ಉತ್ಸವಗಳು ಸಾಮಾಜಿಕವಾಗಿ ಭಿನ್ನ–ಭಿನ್ನವಾಗಿದ್ದರೂ ಇವುಗಳಲ್ಲಿ ವ್ಯತ್ಯಾಸ ಕಾಣುವುದಿಲ್ಲ. ಸಾಮೂಹಿಕವಾಗಿ ಇವುಗಳನ್ನು ಆಚರಿಸುತ್ತಾರೆ.

ಸಾಮಾನ್ಯವಾಗಿ ಬುಡಕಟ್ಟು ಜನರು ದೇವರನ್ನು ಅವರ ವ್ಯಾಪ್ತಿಗನುಗುಣವಾಗಿ ವಿಂಗಡಿಸಿ ಆರಾಧಿಸುತ್ತಾರೆ. ಅಂದರೆ ಮನೆ ದೇವರು, ಕುಲದೇವರು, ಗ್ರಾಮದೇವರು, ನಾಡದೇವರು, ಶಕ್ತಿದೇವತೆ, ವೀರರು, ಪವಾಡ ಪುರುಷರು ಹೀಗೆ ವಿಂಗಡಿಸಿ ಆರಾಧಿಸುತ್ತಾರೆ. ಈ ಹಿನ್ನೆಲೆಯಲ್ಲಿ ಆಯಾ ದೇವರುಗಳ ಹೆಸರಿನಲ್ಲಿ ಹಬ್ಬ, ಜಾತ್ರೆ, ಉತ್ಸವ ಮಾಡಿ ಭಕ್ತಿ ತೋರಿಸುತ್ತಾರೆ. "ಒಂದು ಗುಂಪು ಅಥವಾ ಸಮುದಾಯದ ದೇವರುಗಳಾದವರು ಬಹುಶಃ ಆಯಾ ಗುಂಪಿನವರ ಯಾವುದೋ ಕಾಲದ ಮುಖಂಡರಾಗಿರುವ ಸಾಧ್ಯತೆ ಇದೆ".[2] ಹೀಗೆ ಪ್ರತಿಯೊಂದು ಸಮುದಾಯದವರು ತಮ್ಮದೇ ಆದ ದೇವರನ್ನು ಸೃಷ್ಟಿಸಿಕೊಂಡು ಕುಲ ದೇವರೆಂದು ಆರಾಧಿಸುತ್ತಿರುವುದು ಸ್ಪಷ್ಟವಾಗಿದೆ. ಸಾಮಾನ್ಯವಾಗಿ ಬುಡಕಟ್ಟು ಸಮುದಾಯಗಳು ಪ್ರಕೃತಿ ಆರಾಧಕರೇ ಆಗಿದ್ದರು. ಬರಬರುತ್ತಾ ಪಂಚಭೂತಗಳಿಗೆ ಒಂದು ರೂಪ, ಹೆಸರನ್ನು ಕೊಡುತ್ತಾ ಆರಾಧಿಸತೊಡಗಿದರು.

ಬುಡಕಟ್ಟುಗಳ ಆರ್ಥಿಕ ವ್ಯವಸ್ಥೆ–ಕಸುಬುಗಳು

ಭಾರತೀಯ ಪರಂಪರೆಯಲ್ಲಿ ಜಾತಿ ಪ್ರಾಬಲ್ಯವಿದ್ದಂತೆ ವರ್ಗ ಪ್ರಾಬಲ್ಯವೂ ಕೂಡ ಪ್ರತ್ಯೇಕವೆಂಬಂತಿಲ್ಲ. ಅದು ಶ್ರೇಣಿವ್ಯವಸ್ಥೆಯೊಂದಿಗೆ ಗುರುತಿಸಿಕೊಂಡಿದೆ. ಈ ಶ್ರೇಣಿ ವ್ಯವಸ್ಥೆಯಲ್ಲಿ ಉಚ್ಚ ಜಾತಿಯೆನಿಸಿಕೊಂಡವರೇ ಶ್ರೀಮಂತರಾಗಿದ್ದಾರೆ. ಸಮಾಜದ ಬದಲಾವಣೆಯ ಹಿಂದೆ ಆರ್ಥಿಕ ಪ್ರಗತಿಯು ಬಹುಮುಖ್ಯ ಪಾತ್ರವಹಿಸಿರುತ್ತದೆ. ಶ್ರೇಣೀಕೃತ ಸಮಾಜದಲ್ಲಿ ಶ್ರೀಮಂತರು ಎಲ್ಲಾ ವಲಯದಲ್ಲೂ ಹಿಡಿತ ಸಾಧಿಸಿಕೊಂಡು. ಕೆಳವರ್ಗಗಳನ್ನು ಶ್ರಮಿಕವರ್ಗಳಾಗಿಯೇ ಕಾಣಲಾಗುತ್ತದೆ. ಇವರ ಅಧೀನವಾಗಿರುವ ಕೆಳವರ್ಗದವರು ಎನಿಸಿಕೊಂಡಿರುವ ಶೂದ್ರರು, ಶೂದ್ರಾತಿ ಶೂದ್ರರು ಮತ್ತಷ್ಟು ಆರ್ಥಿಕ ಶೋಷಿತರಾಗಿ ಕಂಡು ಬಂದಿದ್ದಾರೆ",[3] ಮೇಲ್ವರ್ಗದ ಪ್ರಾಬಲ್ಯಕ್ಕೆ ಒಳಗಾಗಿರುವ ಇವರು ಆರ್ಥಿಕ ಗುಲಾಮರಾಗಿಯೇ

ಇರಬೇಕು ಎನ್ನುವುದು ಮೇಲ್ವರ್ಗದ ಪ್ರತಿಪಾದನೆಯಾಗಿದೆ.

ಆರ್ಥಿಕ ವ್ಯವಸ್ಥೆಯು ಸಮಾಜದಲ್ಲಿರುವ ಎಲ್ಲಾ ಜನ ಸಮುದಾಯಗಳಲ್ಲಿ ಸಮನಾಗಿರಲು ಸಾಧ್ಯವಿಲ್ಲ. ಏಕೆಂದರೆ ಆರ್ಥಿಕ ವಲಯವು ಅಸಮಾನತೆಯಿಂದ ಕೂಡಿದೆ. ಅದರಲ್ಲೂ ವಿಶೇಷವಾಗಿ ಭಾರತೀಯ ಸಮಾಜದ ದೃಷ್ಟಿಯಲ್ಲಿ ಹೇಳುವುದಾದರೆ ಆರ್ಥಿಕ ಅಸಮಾನತೆಯನ್ನು ಇಲ್ಲಿ ಗುರುತಿಸಬಹುದು. ಕೆಲವು ಪಟ್ಟಭದ್ರ (ಹಿತಾಸಕ್ತಿ) ಸಮುದಾಯಗಳು ಇಡೀ ಆರ್ಥಿಕ ವ್ಯವಸ್ಥೆಯನ್ನು ತಮ್ಮ ವಶಕ್ಕೆ ತೆಗೆದುಕೊಂಡು ಸವಾರಿ ಮಾಡಲು ಮುಂದಾಗಿದ್ದಾರೆ. ಅಂದರೆ ಬಹು ಆದಾಯ ಮೂಲಗಳನ್ನು ತಮ್ಮ ಕೈವಶ ಮಾಡಿಕೊಂಡು ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಾಗೂ ರಾಜಕೀಯವಾಗಿ ಪ್ರಬಲವಾಗಿರುವುದಲ್ಲದೇ ಕೆಲವು ಸಮುದಾಯಗಳು ಗೌರವ ಕೊಡದ ಹಾಗೂ ಆದಾಯ ತರದ ವೃತ್ತಿಗಳಲ್ಲಿ ತೊಡಗುವಂತಹ ಸ್ಥಿತಿ ಸಂದರ್ಭ ನಿರ್ಮಿಸಿದ್ದಾರೆ. ಧಾರ್ಮಿಕ ಲೇಪನ ನೀಡಿ ಅನಿಷ್ಟ ವೃತ್ತಿ ಕೈಗೊಳ್ಳುವವರ ವಿರುದ್ಧ ನಿಷೇದ ಹೇರಿದರು. ಅದನ್ನೇ ಚಾಚೂ ತಪ್ಪದೇ ಪಾಲಿಸಿಕೊಂಡು ಬಂದ ಸಮುದಾಯಗಳು ಒಂದೊತ್ತಿನ ಊಟಕ್ಕಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಅಲೆಯುತ್ತಾ ಹಾಗೂ ಬೆಟ್ಟಗುಡ್ಡಗಳಲ್ಲಿ ಕ್ರೂರ ಮೃಗಗಳೊಂದಿಗೆ, ವಿಷ ಜಂತುಗಳೊಂದಿಗೆ ಹೋರಾಟ ಮಾಡುತ್ತಾ ಬದುಕುತ್ತಿದ್ದಾರೆ. ಇವರ ಬದುಕಿನ ಪ್ರತಿ ಗಳಿಗೆಯು ಹೋರಾಟದ ಬದುಕಾಗಿದೆ.

ಬುಡಕಟ್ಟು ಸಮುದಾಯಗಳು ಮೊದಲಿಗೆ ಬೆಟ್ಟಗುಡ್ಡ ಕಾಡುಗಳಲ್ಲಿ ಸಿಗುತ್ತಿದ್ದಂತಹ ಗೆಡ್ಡೆ ಗೆಣಸು, ಹಣ್ಣು ಹಂಪಲು, ನಾರು ಬೇರುಗಳು, ಸೊಪ್ಪು ಸೆದೆಗಳನ್ನು ತಿಂದು ಜೀವನ ನಡೆಸುತ್ತಿದ್ದರು. ಆದರೆ ಇವುಗಳೆಲ್ಲವೂ ಎಲ್ಲಾ ಋತುಮಾನಗಳಲ್ಲೂ ಸಿಗುತ್ತಿರಲಿಲ್ಲ. ಕೇವಲ ನಿರ್ದಿಷ್ಟ ಕಾಲಮಾನಗಳಲ್ಲಿ ಮಾತ್ರ ಸಿಗುವಂತಹುದಾಗಿರುತ್ತಿದ್ದವು. ಇವುಗಳನ್ನೇ ಸಂಗ್ರಹಿಸಿ ತಿಂದು ತಮ್ಮ ಹಸಿವನ್ನು ನೀಗಿಸಿಕೊಳ್ಳುತ್ತಿದ್ದರು. ಕಾಲಾನಂತರದಲ್ಲಿ ಪ್ರಾಣಿ ಪಕ್ಷಿಗಳನ್ನು, ಜಲಚರಗಳನ್ನು ಬೇಟೆಯಾಡುವ ಪ್ರವೃತ್ತಿ ಬೆಳೆಸಿಕೊಂಡರು. ಮತ್ತೆ ಇವರು ಬದುಕುಳಿಯಲು ಆಹಾರದ ಸಂಗ್ರಹಣೆ ಅನಿವಾರ್ಯವಾಯಿತು. ಜೊತೆಗೆ ಇವರು ಬೆಟ್ಟಗುಡ್ಡ, ಕಾಡುಮೇಡುಗಳಲ್ಲಿ ವಾಸಿಸುತ್ತಿದ್ದರಿಂದ ಅಲ್ಲಿನ ಕ್ರೂರ ಪ್ರಾಣಿಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಬೇಟೆಯಾಡುವುದು ಕೂಡ ಅನಿವಾರ್ಯವಾಯಿತು. ಈ ಬುಡಕಟ್ಟು ಜನರಲ್ಲಿ ಕುಲಕಸುಬು ಎಂಬುದು ಅವನ ಹಸಿವು ಹೆಚ್ಚಾದಂತೆ ಅದನ್ನು ನೀಗಿಸಿಕೊಳ್ಳುವುದಕ್ಕಾಗಿ ಆಹಾರದ ಹುಡುಕಾಟ ಪ್ರಾರಂಭವಾಯಿತು. ಈ ಹುಡುಕಾಟದಲ್ಲಿ ಕಸುಬು ಮತ್ತು ವೃತ್ತಿಯ ಕವಲು ಅಡಗಿತ್ತು. ಅಂದರೆ ಬುಡಕಟ್ಟು ಜನರು ಆಹಾರದ ಹುಡುಕಾಟದಲ್ಲಿ ಕಸುಬನ್ನು ಕಂಡುಕೊಂಡರು. ಮೊದಲಿಗೆ ಬೇಟೆಯನ್ನು ಆರಂಭಿಸಿ ಅದನ್ನೇ ಕಸುಬನ್ನಾಗಿ ಸ್ವೀಕರಿಸಿ ನಂತರದಲ್ಲಿ ಪಶುಪಾಲನೆ, ಹೈನು ಸಾಕಾಣಿಕೆ, ವ್ಯವಸಾಯ ಇನ್ನೂ ಹಲವಾರು ಕಸುಬುಗಳನ್ನು ಅವಲಂಬಿಸಿದರು. ಹೀಗೆ ವೃತ್ತಿಗಳನ್ನು ಅವಲಂಬಿಸಿ ಬೆಟ್ಟಗುಡ್ಡ ಪ್ರದೇಶಗಳನ್ನು ತಮ್ಮ ವಾಸದ ನೆಲೆಯಾಗಿ ಆಯ್ದುಕೊಂಡು ಅಲ್ಲಿ ದೊರೆಯುವಂತಹ ಬಿದಿರು ಕಟ್ಟಿಗೆ, ಜೇನು ಹೀಗೆ ವಿವಿಧ ರೀತಿಯ ವಸ್ತುಗಳನ್ನು ಅವಲಂಬಿಸಿ ಜೀವಿಸುತ್ತಿದರು.

ಸಾಹಿತ್ಯದಲ್ಲಿ ಬುಡಕಟ್ಟು

ಜನಪದ ಸಾಹಿತ್ಯದಲ್ಲಿ ಜನಪದ ಹಾಡುಗಳು ಪ್ರಮುಖವಾಗಿವೆ. ಜನರ ಅನುಭವದ ತಿರುಳೇ ಜನಪದ ಸಾಹಿತ್ಯ ಇಂತಹ ಸಂಸ್ಕೃತಿ ಮತ್ತು ಪರಂಪರೆಯನ್ನು ಹೊಂದಿರುವ ಬುಡಕಟ್ಟು ಜನರು ತಮ್ಮ ಅನುಭವಗಳಿಗೆ ಅಭಿವ್ಯಕ್ತಿಯನ್ನು ನೀಡುವ ಸಹಜ ಹೃದಯವನ್ನು ಹೊಂದಿದವರಾಗಿದ್ದಾರೆ. ತಮಗಾದ ನೋವು–ನಲಿವುಗಳನ್ನು, ಬೇಸರವನ್ನು ಕಷ್ಟಗಳನ್ನು, ಸುಖ–ದುಃಖಗಳನ್ನು ಹಾಡುಗಳ ಮೂಲಕ ಹೊರ ಹಾಕುತ್ತಾ ಬಂದಿದ್ದಾರೆ. ಜನಪದ ಸಾಹಿತ್ಯ ಆಯಾ ಜನಾಂಗಗಳ ಕಂಠಸ್ಥ ಸಂಪ್ರದಾಯದಲ್ಲೇ ಉಳಿದು ಬಂದಿದೆ. "ಇದು

ಸಾಮಾನ್ಯ ಜನತೆಯ ವೇದ, ಗ್ರಾಮ ಸಂಸ್ಕೃತಿಯ ದರ್ಪಣ, ಹಳ್ಳಿಯ ಸರಳ ಜೀವನದ ವಿವಿಧ ಮುಖಗಳು ಅದರಲ್ಲಿ ಮಾರ್ಪೊಳೆಯುತ್ತವೆ. ಸಂಸಾರದ ಕಷ್ಟ–ಕ್ಲೇಶಗಳು, ಸುಖ– ಸಂತೋಷಗಳು, ಬಂಧು–ಮಿತ್ರರ ವಿವಿಧ ಸಂಬಂಧಗಳು, ಜಾತಿಮತ, ಹಬ್ಬ–ಹರಿದಿನ, ರೂಢಿ, ಸಂಪ್ರದಾಯಗಳು, ಒಟ್ಟಿನಲ್ಲಿ ಅವರ ಜೀವನವನ್ನು ರೂಪಿಸುವ ಸ್ಫೂರ್ತಿ ವಿಶೇಷಗಳು: ಜಾನಪದ ವಾಙ್ಮಯದಲ್ಲಿ ವಿಪುಲವಾಗಿ ದೊರಕುತ್ತವೆ."[4] ಎಂದು ಹೇಳಿದ್ದಾರೆ. ಜನಪದ ಸಾಹಿತ್ಯ ಆಯಾ ಸಮುದಾಯದ ಆಯಾ ಸಮಾಜದ ಚೈತನ್ಯದ ಪ್ರತಿಬಿಂಬಗಳು ಯಾವುದೇ ಒಂದು ಸಮುದಾಯದ ಸಂಸ್ಕೃತಿಯನ್ನು ಅರಿಯಬೇಕಾದರೆ ಆ ಸಮುದಾಯದ ಜನಪದ ಸಂಪತ್ತನ್ನು ವಿವರವಾಗಿ ಅಭ್ಯಸಿಸಬೇಕಾಗುತ್ತದೆ. ಕಾರಣ ಅದು ಆ ಜನಾಂಗದ ಮಾನಸಿಕ ಚೈತನ್ಯದ ಪ್ರತಿರೂಪವಾಗಿರುತ್ತದೆ. ಜನರ ನೋವು–ನಲಿವು, ಸುಖ–ದುಃಖ, ದೈನಂದಿನ ಬದುಕಿನ ಆಗು–ಹೋಗುಗಳೆಲ್ಲ ಅವರ ಜನಪದ ಸಾಹಿತ್ಯದ ಮುಖೇನ ಹೊರಬರುತ್ತದೆ. ಪ್ರತಿಯೊಂದು ಬುಡಕಟ್ಟು ನಿಸರ್ಗದಲ್ಲಿನ ಅಗೋಚರ ಶಕ್ತಿಗಳಲ್ಲಿ ನಂಬಿಕೆ ಇಟ್ಟು ಅವುಗಳನ್ನು ಒಲಿಸಿಕೊಳ್ಳಲು ಪ್ರಾರ್ಥನೆಗಳನ್ನು ರೂಢಿಸಿಕೊಂಡಿತು. ಬಲಿ ಹೆಸರಿನಲ್ಲಿ ಪ್ರಾಣಿಗಳನ್ನು ಬಲಿಕೊಟ್ಟು ದೇವರನ್ನು ಒಲಿಸಿಕೊಳ್ಳುವ ಪ್ರಯತ್ನ ಮಾಡುತ್ತಾ ಬಂದಿತು. ಪ್ರಾರ್ಥನೆಯ ಹೆಸರಿನಲ್ಲಿ ಸಾಹಿತ್ಯ ಹುಟ್ಟಿಕೊಂಡಿತು. ದೇವರ ಪದಗಳು ಹುಟ್ಟಿಕೊಂಡವು. ಬರಬರುತ್ತ ದಿನವಿಡೀ ದುಡಿದ ದೇಹಕ್ಕೆ, ಮನಸ್ಸಿಗೆ ಉಲ್ಲಾಸವಾಗುವಂತೆ ಹಾಡುಗಳನ್ನು ಹಾಡತೊಡಗಿದರು. ತಮಗಾದ ನೋವು, ಕಷ್ಟಗಳನ್ನು ಮರೆಯಲು, ತಮಗಾದ ಸಂತೋಷವನ್ನು ಹೊರಹಾಕಲು ಜನಪದ ಸಾಹಿತ್ಯ ಹುಟ್ಟಿಕೊಂಡಿತು. ಇದು ಜನಪದರ ದೈನಂದಿನ ಜೀವನದ ಅನುಭವದ ಕೈಗನ್ನಡಿಯಾಯಿತು.

ಉಪಸಂಹಾರ

ಜಾಗತೀಕರಣದ ದಟ್ಟ ಛಾಯೆ ಎಲ್ಲಾ ಕಡೆ ತನ್ನ ಪ್ರಭಾವ ಬೀರುತ್ತಿದೆ. ಈ ಮಾತು ಬುಡಕಟ್ಟುಗಳಿಗೂ ಹೊರತಾಗಿಲ್ಲ. ಸಮುದಾಯವೊಂದು ತನ್ನ ಸಾಂಸ್ಕೃತಿಕ ಕೋಶದ ಒಳಗೆ ಕಾಲದ ಅನಿವಾರ್ಯತೆಯ ಫಲವಾಗಿ ಆಗುವ ಬದಲಾವಣೆಗಳನ್ನು ಸಮಾಧಾನದಿಂದ ಗಮನಿಸುತ್ತ ಇರುತ್ತದೆ. ಬದಲಾವಣೆಯ ಲಯಕ್ಕೆ ತನ್ನನ್ನು, ತನ್ನ ಸಂವೇದನೆಗಳನ್ನು ಹೊಂದಿಸಿಕೊಳ್ಳುವ ಪ್ರಯತ್ನ ಸಮುದಾಯವನ್ನು ಜೀವಂತವಾಗಿರಿಸುತ್ತದೆ. ಅಂದರೆ ಸಮುದಾಯ ಎಲ್ಲಾ ಬದಲಾವಣೆಗಳನ್ನು, ಏರುಪೇರುಗಳನ್ನು ಒಪ್ಪಿಕೊಳ್ಳುತ್ತದೆ ಎಂದರ್ಥವಲ್ಲ, ಬದಲಾಗಿ ಅನಿವಾರ್ಯತೆಯಿಂದಾಗಿ, ಪರಿಸ್ಥಿತಿಗೆ ಅನುಗುಣವಾಗಿ ಬದಲಾಗುತ್ತದೆ. ಆದರೆ ತನ್ನ ಸಂಸ್ಕೃತಿಯ ವೈವಿಧ್ಯತೆ, ಅನನ್ಯತೆಯನ್ನು ಉಳಿಸಿಕೊಂಡೆ ಬದಲಾಗುತ್ತದೆ ಎಂಬುದು ಗಮನಾರ್ಹ ಅಂಶವಾಗಿದೆ. ಬುಡಕಟ್ಟು ಸಮುದಾಯಗಳಲ್ಲಿ ಪ್ರಧಾನವಾಗಿ ಕಂಡುಬರುವ ಲಂಬಾಣಿ, ಕಾಡುಗೊಲ್ಲ ಮತ್ತು ಮ್ಯಾಸಬೇಡ ಬುಡಕಟ್ಟುಗಳು ತಮ್ಮ ಸಂಸ್ಕೃತಿಯನ್ನು ಉಳಿಸಿಕೊಳ್ಳಲು ಹೆಣಗಾಡುತ್ತಿವೆ. ಬುಡಕಟ್ಟು ಸಮುದಾಯಗಳು ಸಂಪ್ರದಾಯ, ಮೂಢನಂಬಿಕೆಗಳನ್ನು ತೊರೆದು ಬದಲಾವಣೆಗೆ ಹೊಂದಿಕೊಳ್ಳುವುದು ಪ್ರಸ್ತುತ ಸಂದರ್ಭಕ್ಕೆ ಅನಿವಾರ್ಯವಾಗಿದೆ. 'ಎಲ್ಲಿ ಹುಲ್ಲು ನೀರು ಇದೆಯೋ ಅಲ್ಲಿ ನಮ್ಮ ಮನಿಮಾರು' ಎಂಬ ಸಿದ್ಧಾಂತವನ್ನು ಹೊಂದಿದ್ದ ಈ ಮೂರು ಬುಡಕಟ್ಟುಗಳು ಇಂದು ಬಯಲು ಸೀಮೆಯಾಗಿರುವ ಪ್ರದೇಶದಲ್ಲಿ ನೆಲೆನಿಂತಿದ್ದಾರೆ. ನಾಗರಿಕತೆಗೆ ಹೊಂದಿಕೊಳ್ಳುತ್ತಿರುವ ಸಮುದಾಯಗಳ ಜೀವನ ಕ್ರಮದಲ್ಲಿ ಸಾಕಷ್ಟು ಬದಲಾವಣೆಗಳಾಗುತ್ತಿರುವುದನ್ನು ನೋಡಬಹುದಾಗಿದೆ. ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಹಾಗೂ ರಾಜಕೀಯ ಸ್ಥಿತಿಗತಿಗಳಲ್ಲಿ ಬುಡಕಟ್ಟು ಸಮುದಾಯಗಳ ಸ್ಥಾನಮಾನ ಇಂದು ಸಾಕಷ್ಟು ಬದಲಾಗುತ್ತಿದೆ ಎಂಬುದನ್ನು ಗಮನಿಸಬಹುದಾಗಿದೆ.

ಕೊನೆಟಿಪ್ಪಣಿಗಳು

1. ಚೆಲುವಾರಾಜು. (1997). *ಜುಂಜಪ್ಪ.* ಅಂಕಿತ ಪುಸ್ತಕ. ಪು.ಸಂ.14
2. ವೃಷಬೇಂದ್ರಸ್ವಾಮಿ.ಎಸ್.ಎಂ. (ಸಂ.) (1998). *ಜನಪದ ಸಾಹಿತ್ಯ ದರ್ಶನ ಭಾಗ–9.* ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಪುಟ. 16.
3. ಶಂಕರನಾರಾಯಣ ತೀ.ನಂ. (1982). *ಕಾಡಗೊಲ್ಲ ಸಂಪ್ರದಾಯ ಮತ್ತು ನಂಬಿಕೆಗಳು.* ಪುಟ. 174.
4. ಮಲ್ಲಿಕಾರ್ಜುನ ಕುಂಬಾರ. (2014). *ನಮ್ಮ ಪರಿಸರದ ಲಂಬಾಣಿಗರು.* ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಪುಟ. 17